ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	1996-97	1997-98	1998-99
11.	ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಮಾಗಡಿಯಲ್ಲಿ ರೇಷ್ಮೆ ನಿರೀಕ್ಷಕರ ವಸತಿಗೃಹ ಅಭಿವೃದ್ಧಿ ಕಾಮಗಾರಿ	—	100000-00	
12.	ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಮಾಗಡಿಯಲ್ಲಿ ರೇಷ್ಮೆ ವಿಸ್ತೀರಣಾಧಿಕಾರಿ ವಸತಿಗೃಹ ಅಭಿವೃದ್ಧಿ ಕಾಮಗಾರಿ	—	76000-00	
13.	ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರದ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಕಾಂಪೌಂಡ್ ನಿರ್ಮಾಣದ ಕಾಮಗಾರಿ ಚೈನೇಜ್ ಇಂದ 360 ಮೀಟರ್	—	430000-00	
14.	ಮಾಗಡಿ ತಾಲ್ಲೂಕು ವಿ.ಜಿ. ದೊಡ್ಡಿಯಲ್ಲಿರುವ ಹಳೆಯ ರೇಷ್ಮೆ ಗೂಡು ಮಾರುಕಟ್ಟೆ ಕಟ್ಟಡದ ಅಭಿವೃದ್ಧಿ ಕಾಮಗಾರಿ	—	177000-00	
15.	ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಮಾಗಡಿಯಲ್ಲಿರುವ ಜನರೇಟರ್ ರೂಮ್ ಕಟ್ಟಡದ ಕಾಮಗಾರಿ	—	62000-00	
16.	ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಸೋಲೂರು ಜನರೇಟರ್ ರೂಮ್ ಕಟ್ಟಡದ ಕಾಮಗಾರಿ ಯೂನಿಟ್-1 ಮತ್ತು -2	—	124000-00	
17.	ಮಾಡಿ ತಾಲ್ಲೂಕು ಕುದೂರು ರೇಷ್ಮೆ ಗೂಡು ಮಾರುಕಟ್ಟೆ ಕಟ್ಟಡದ ಆವರಣದಲ್ಲಿ ಸ್ಟೆಪಿಂಗ್ ಷೆಡ್ ನಿರ್ಮಾಣದ ಕಾಮಗಾರಿ	—	200000-00	
	ಒಟ್ಟು	997000-00	1 483000-00	

ರಾಜ್ಯದಲ್ಲಿರುವ ಜವಳಿ ಮಗ್ಗಗಳು.

ಶ್ರೀ ಉಜ್ಜನೇಶ್ವರ ಬಸವನಪ್ಪ ಬಣಕಾರ (ಹಿರೇಕೆರೂರು) :— ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಕಾರ್ಯಾರಂಭಗೊಂಡಿರುವ ಜವಳಿ ಮಗ್ಗಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಅ) 1997-98ನೇ ಸಾಲಿನ ಅಂತ್ಯದವರೆಗೆ ಪ್ರತಿಯೊಂದು ಜಿಲ್ಲೆಗಳಲ್ಲಿರುವ ಮಗ್ಗಗಳ ಸಂಖ್ಯೆ ಎಷ್ಟು ರಾಜ್ಯದಲ್ಲಿ ನಡೆಯುತ್ತಿರುವ ಮಗ್ಗಗಳ ಸಂಖ್ಯೆ ಎಷ್ಟು ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಮಗ್ಗಗಳ ಸಂಖ್ಯೆ ಎಷ್ಟು

ಆ) ಅತಿ ಹಾನಿಯಲ್ಲಿರುವ ಮಗ್ಗಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಸಿ. ಎಂ. ಉದಾಸಿ (ಜವಳಿ ಸಚಿವರು) :—

ಅ) ೧೯೯೬-೯೭ನೇ ಸಾಲಿನ ಗಣತಿ ಪ್ರಕಾರ ರಾಜ್ಯದಲ್ಲಿ ೭೬೬೦೫ ಕೈಮಗ್ಗಗಳು ಮತ್ತು ೮೮೫೬೬ ವಿದ್ಯುತ್ ಮಗ್ಗಗಳು ಇರುತ್ತವೆ. ರಾಜ್ಯದಲ್ಲಿ ಒಟ್ಟು ೫೮ ಜವಳಿ ಗಿರಣಿಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾವಾರು ಮಗ್ಗ ಮತ್ತು ಗಿರಣಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

	ಜಿಲ್ಲೆಯ ಹೆಸರು	ಕೈಮಗ್ಗಗಳು	ವಿದ್ಯುತ್ ಮಗ್ಗಗಳು	ಜವಳಿ ಗಿರಣಿಗಳು
೧.	ಬೆಂಗಳೂರು (ನ)	೮೩೫೨	೨೫೩೨೧	೧೦
೨.	ಬೆಂಗಳೂರು (ಗ್ರಾ)	೯೩೮೮	೩೨೯೭೫	೪
೩.	ಬೆಳಗಾಂ	೫೦೯೯	೧೪೬೫೦	೪
೪.	ಬಿಜಾಪುರ	೨೪೩೫೫	೧೧೬೬೮	೩
೫.	ಬಳ್ಳಾರಿ	೨೪೦೨	೨೮	೩
೬.	ಬೀದರ್	೧೩೬೬	....	...
೭.	ಚಿಕ್ಕಮಗಳೂರು	೨೧೮	....	...
೮.	ಚಿತ್ರದುರ್ಗ	೬೮೫೦	೪೪	೧೦
೯.	ಧಾರವಾಡ	೮೯೧೯	೨೩೯೭	೧೨
೧೦.	ದ.ಕ. ಉಡುಪಿ	೧೪೪೨	೧೦	...
೧೧.	ಗುಲ್ಬರ್ಗಾ	೩೫೨೫	೩೪	೧
೧೨.	ಹಾಸನ	೯೬.೨	....	...
೧೩.	ಕೋಲಾರ	೧೮೨೭	೨೫೬	...

೧೪.	ಕೊಡಗು	೨೮	.....	...
೧೫.	ಮಂಡ್ಯ	೨೩೮	೩೦	...
೧೬.	ಮೈಸೂರು	೧೩೬೪	೨೦೫	೯
೧೭.	ರಾಯಚೂರು	೧೪೭೩	೪೪೫	೨
೧೮.	ಶಿವಮೊಗ್ಗ	೧೦೨೬	.....	...
೧೯.	ತುಮಕೂರು	೬೪೨೬	೪೨೭	...
೨೦.	ಉತ್ತರ ಕನ್ನಡ	೭೪	೩೧	...
	ಒಟ್ಟು	೭೬೬೦೫	೪೮೫೬೬	೫೮

ಮಗ್ಗಗಳ ಸಂಖ್ಯೆ (ಅ) ದಲ್ಲಿರುವಂತೆ ಇರುತ್ತದೆ. ಮಗ್ಗಗಳ ಬಗ್ಗೆ ಲಾಭ ನಷ್ಟಗಳ ಮಾಹಿತಿ ಲಭ್ಯವಿಲ್ಲ.

ಅ) ೫೮ ಗಿರಣಿಗಳ ಪೈಕಿ ಸಹಕಾರ ವಲಯದಲ್ಲಿ ೧೨ ಎನ್‌ಟಿಸಿ ಅಡಿಯಲ್ಲಿ ೪, ರಾಜ್ಯ ಸರ್ಕಾರದ ಅಡಿಯಲ್ಲಿ ೧ ಮತ್ತು ಖಾಸಗಿ ವಲಯದಲ್ಲಿ ೪೦ ಗಿರಣಿಗಳಿರುತ್ತವೆ. ಸಹಕಾರ ವಲಯದ ೧೦ ಗಿರಣಿಗಳ ಪೈಕಿ ೨ ಗಿರಣಿಗಳ ಸಮಾಪನೆಯಲ್ಲಿ (liquidation)ಇರುತ್ತದೆ. ೨ ಗಿರಣಿಗಳು ಮುಚ್ಚಲ್ಪಟ್ಟಿರುತ್ತವೆ. ರಾಯಚೂರು ಸ.ನೂ.ಗಿ ಮತ್ತು ಬೆಳಗಾವಿ ಸ.ನೂ.ಗಿ ಉಳಿದ ಗಿರಣಿಗಳ ಪೈಕಿ ೨ ಗಿರಣಿಗಳು (ಐನಪಟ್ಟ) ಮತ್ತು ಗದಗ್ ರಾಜ್ಯದಲ್ಲಿದ್ದು ಉಳಿದ ೬ ಗಿರಣಿಗಳು ಹಾನಿಯಲ್ಲಿರುತ್ತವೆ. ಎನ್ ಟಿಸಿ ಮತ್ತು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಗಿರಣಿಗಳು ಹಾನಿಯಲ್ಲಿರುತ್ತವೆ. ಏನ್ ಟಿಸಿಯಲ್ಲಿ ೨ ಗಿರಣಿಗಳು ಮುಚ್ಚಿದ್ದು ೨ ಗಿರಣಿಗಳು ಕೆಲಸ ಮಾಡುತ್ತಿವೆ. ಖಾಸಗಿ ವಲಯದಲ್ಲಿ ೧೧ ಗಿರಣಿಗಳು ಮುಚ್ಚಿದ್ದು ಉಳಿದ ೩೦ ಗಿರಣಿಗಳಲ್ಲಿ ೧೪ ಗಿರಣಿಗಳು ಲಾಭದಲ್ಲಿದ್ದು ೧೬ ನಷ್ಟದಲ್ಲಿರುತ್ತವೆ. ಮಹದೇವ ಜವಳಿ ಗಿರಣಿ ಸಮಾಪನೆಯಲ್ಲಿದೆ.

ಇ) ಅತಿ ಹಾನಿಯಲ್ಲಿರುವ ಗಿರಣಿಗಳ ಬಗ್ಗೆ ರಾಜ್ಯ ಸರ್ಕಾರವು ಈಗಾಗಲೇ ಒನ್ ಟೈಮ್ ಸೆಟ್ ಮುಟ್ ಯೋಜನೆಯನ್ನು ರೂಪಿಸಿದ್ದು ಅದರಂತೆ ೭ ಗಿರಣಿಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಲ್ಪಿಸಲಾಗಿದ್ದು ಇದರ ಪೈಕಿ ೩ ಪ್ರಸ್ತಾವನೆಗಳು ಮಂಜೂರಾಗಿರುತ್ತದೆ. ಉಳಿದ ೪ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿ ಇದೆ. ಗಿರಣಿಗಳನ್ನು ಆಧುನೀಕರಣಗೊಳಿಸಲು ಸಹ ಆಗಾಗಲೇ ೫ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ೧ ಪ್ರಸ್ತಾವನೆ ಈಗಾಗಲೇ ಮಂಜೂರಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆಯ ಕಾವೂರಿನ ಮುಲ್ಲಕಾಡಿನ ಡ್ರೈನೇಟ್ ನೀರಿನ್ನು ಸಮುದ್ರಕ್ಕೆ ಬಿಡುತ್ತಿರುವುದು.

79(202) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯ ಕಾವೂರಿನ ಮುಲ್ಲಕಾಡಿನ ಡ್ರೈನೇಜ್ ಸ್ಥಾವರದಿಂದ ನೀರನ್ನು ತೆರೆದ ಕಾಲುವೆಯ ವ್ಯವಸ್ಥೆಯ ಮೂಲಕ ಸಮುದ್ರಕ್ಕೆ ಬಿಡುತ್ತಿರುವುದರಿಂದ ಜನರ ಆರೋಗ್ಯಕ್ಕೆ ಹಾನಿ ಎಂಬುದನ್ನು ಸರ್ಕಾರವು ಗಮನಿಸಿದೆಯೇ?

ಆ) ಆರೋಗ್ಯಕ್ಕೆ ಹಾನಿಕಾರಕವಾಗಿರುವ ಈ ವ್ಯವಸ್ಥೆಯನ್ನು ಬದಲಿಸಿ ಕೊಳವೆ ಮೂಲಕ ಸಮುದ್ರಕ್ಕೆ ನೀರನ್ನು ಬಿಡುವ ವ್ಯವಸ್ಥೆಯನ್ನು ಶೀಘ್ರವಾಗಿ ಸರ್ಕಾರವು ಮಾಡುವುದೇ?

ಇ) ಸ್ಥಳೀಯ ನಾಗರೀಕರು ಈ ಕುರಿತು ಎಷ್ಟು ಮನವಿಗಳನ್ನು ಸಲ್ಲಿಸಿದ್ದಾರೆ?

ಈ) ಈ ಸಮಸ್ಯೆಯ ಪರಿಹಾರಕ್ಕಾಗಿ ಯಾವ ಯೋಜನೆಯು ಸರ್ಕಾರದ ಮುಂದೆ ಇದೆ? ಯಾವಾಗ ಅದನ್ನು ವ್ಯವಸ್ಥೆಗೊಳಿಸಲಾಗುವುದು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಹೌದು

ಆ) ಈ ಸಮಸ್ಯೆಯನ್ನು ಪರಿಹರಿಸಲು ಏಷ್ಯ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ 35 ಕೋಟಿ ರೂಗಳ ಯೋಜನೆಯನ್ನು ತಯಾರಿಸಲಾಗುತ್ತಿದೆ.

ಇ) 3 ಮನವಿಗಳು

ಈ) "ಆ" ನಲ್ಲಿ ಉತ್ತರಿಸಿರುವಂತೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಸ್‌ಸಿ : ಎಸ್‌ಟಿ ಜನಾಂಗದವರಿಗೆ ವಸತಿ ಶಾಲೆ.

81(220) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಸ್‌ಸಿ : ಎಸ್‌ಟಿ ಜನಾಂಗದವರ ಒಟ್ಟು ಸಂಖ್ಯೆ ಎಷ್ಟು? (ಪ್ರತ್ಯೇಕ ವಿವರ ಒದಗಿಸುವುದು)